**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ.**

**ಎಸ್.ಸಿ ನಂಃ 10007/2023**

ಫಿರ್ಯಾದಿದಾರರು : **ರಾಜಾನುಕುಂಟೆ ಪೋಲೀಸ್ ಠಾಣೆ**

**ವಿರುದ್ದ**

**ಆರೋಪಿ** : **ಮಧುಚಂದ್ರ**

**ದೋಷಾರೋಪಣೆ**

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ 4ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರಾದ ಶ್ರೀ ರಮೇಶ ದುರುಗಪ್ಪ ಏಕಬೋಟೆ, ಆದ ನಾನು

ಆರೋಪಿಯಾದ **ಮಧು ಚಂದ್ರ,** ತಂದೆಃ ಪಿಳ್ಳಪ್ಪ, ವಯಸ್ಸು 32 ವರ್ಷ, ವಾಸ ಃ ಅನಂತಪುರ, ಯಲಹಂಕ ಹೋಬಳಿ, ಯಲಹಂಕ ತಾಲ್ಲೂಕು, ಬೆಂಗಳೂರು ಜಿಲ್ಲೆ.

**ನಿಮ್ಮ ವಿರುದ್ಧ ಮಾಡಲಾದ ದೋಷಾರೋಪಣೆ ಏನೆಂದರೆಃ**

ಆರೋಪಿಯಾದ ನೀನು ಬೆಂಗಳೂರು ನಗರ ಜಿಲ್ಲೆ ಯಲಹಂಕ ತಾಲ್ಲೂಕು ಹೆಸರಘಟ್ಟ ಹೋಬಳಿ, ಶಾನಭೋಗನಹಳ್ಳಿ ಗ್ರಾಮದ ವಾಸಿಯಾದ ಮೃತ ರಾಶಿ ಅವರು

ಓದುತ್ತಿದ್ದು ಬಿಡುವಿನ ಸಮಯದಲ್ಲಿ ತನ್ನ ಅಕ್ಕ ಚಾಸಾ-1 ರಕ್ಷೀತಾರೊಂದಿಗೆ ಮತ್ತು ತನ್ನ ತಾಯಿ ಚಾಸಾ-4 ಸುಶೀಲಮ್ಮ ಅವರೊಂದಿಗೆ ಸೀಬೆಕಾಯಿ ಕೀಳುವ ಕೂಲಿ ಕೆಲಸಕ್ಕೆ ಹೋಗುತ್ತಿದ್ದಾಗ ಆರೋಪಿಯಾದ ನೀನು ಬುಲೇರೋ ವಾಹನದ ಚಾಲಕನಾಗಿದ್ದು ವಾಹನದಲ್ಲಿ ಸೀಬೆಕಾಯಿ ಲೋಡ್ ಮಾಡಿಕೊಂಡು ಬರಲು ಹೋಗುತ್ತಿದ್ದು ಆ ಸಮಯದಲ್ಲಿ ಆರೋಪಿಯಾದ ನಿನಗೆ ಮದುವೆಯಾಗಿ ಹೆಂಡತಿ ಮಕ್ಕಳಿದ್ದರೂ ಸಹ ಸದರಿ ವಿಚಾರವನ್ನು ರಾಶಿ ಅವರಿಗೆ ತಿಳಿಸದೇ ನಿಮ್ಮಿಬ್ಬರಲ್ಲಿ ಪರಸ್ಪರ ಪರಿಚಯವಾಗಿ ಪ್ರೀತಿಸುತ್ತಿದ್ದು ಹಾಗೂ ಪೋನ್ ಮೂಲಕ ಮಾತನಾಡುವುದು ಹಾಗೂ ವಾಟ್ಸ ಅಪ್ ಮತ್ತು ಇನಸ್ಟಾ ಮೂಲಕ ಮೆಸೇಜಗಳನ್ನು ಕಳುಹಿಸುವುದು ಮತ್ತು ಮನೆಯಲ್ಲಿ ಒಬ್ಬಳೇ ಇರುವಾಗ ಮನೆಗೆ ಬಂದು ಹೋಗುತ್ತಿದ್ದು ನಿನಗೆ ಮದುವೆಯಾದ ಮತ್ತು ಹೆಂಡತಿ ಮಕ್ಕಳು ಇರುವ ವಿಚಾರ ಗೊತ್ತಾದ ನಂತರ ನಿನ್ನಿಂದ ದೂರವಿದ್ದು ಸರಿಯಾಗಿ ಮಾತನಾಡದೇ ಇದ್ದುದರಿಂದ ಮತ್ತು ನೀನು ಪೋನ್ ಮಾಡಿದರೂ ಸಹ ಸ್ವಿಚ್ ಆಫ ಮಾಡುತ್ತಿದ್ದರಿಂದ ಘಟನೆಯ 3 ತಿಂಗಳ ಹಿಂದೆ ರಾತ್ರಿ ಕುಡಿದು ರಾಶಿ ಅವರ ಮನೆಯ ಬಳಿ ಬಂದು ಮದುವೆಯಾಗುವಂತೆ ಒತ್ತಾಯ ಮಾಡಿದ್ದರಿಂದಆಗ ರಾಶಿ ಅವರು ಮದುವೆಯಾಗುವುದಿಲ್ಲವೆಂದು ತಿಳಿಸಿದ್ದರಿಂದ ರಾಶಿ ಮತ್ತು ಅವರ ತಾಯಿ ಹಾಗೂ ಅಕ್ಕನವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ನನ್ನನ್ನು ಮದುವೆಯಾಗದಿದ್ದರೇ ಕೊಲೆ ಮಾಡುವುದಾಗಿ ಹೆದರಿಸಿ ಅಲ್ಲಿಂದ ಹೊರಟು ಹೋಗಿ ದಿನಾಂಕಃ 17.01.2023 ರಂದು ಮದ್ಯಾಹ್ನ 01.30 ಗಂಟೆಯ ಸಮಯದಲ್ಲಿ ರಾಶಿ ಅವರಿಗೆ ಪೋನ್ ಮಾಡಿದ್ದು ಆಗ ರಾಶಿ

ಫೋನ್ ರೀಸೀವ್ ಮಾಡಿ ಇನ್ನು ಮುಂದೆ ನನಗೂ ನಿನಗೂ ಯವುದೇ ಸಂಬಂಧ ಇಲ್ಲ ಎಂದು ಹೇಳಿದ್ದರೂ ಸಹ ನೀನು ಏಕೆ ನನಗೆ ಪದೆ ಪದೇ ಫೋನ ಮಾಡುತ್ತೀಯಾ ಎಂದು ಬೈಯ್ದು ಫೋನ್ ಕಟ್ ಮಾಡಿದ್ದರಿಂದ ಸದರಿ ರಾಶಿಯವರನ್ನು ಮದುವೆಯಾಗಲು ಮಾತನಾಡಲು ಮತ್ತು ಒಪ್ಪದಿದ್ದಲ್ಲಿ ಮುಗಿಸಬೇಕೆಂದು ತೀರ್ಮಾನ ಮಡಿ ನಿನ್ನ ಕೆಎ-50-ಇಡಿ-3303 ಹೋಂಡಾ ಆ್ಯಕ್ಟಿವ್ ಗಾಡಿಯಲ್ಲಿ ರಾಶಿಯ ಊರಿಗೆ ಹೋಗುವಾಗ ಸಿಂಗನಾಯಕನಹಳ್ಳಿ ಬಳಿಯಿರುವ ಬಿಗ್ ಮಾರ್ಕೇಟ್ ಸ್ಟೋರ್ ಗೆ ಹೋಗಿ ಸ್ಟೀಲ್ ಚಾಕುವನ್ನು ಖರೀದಿಸಿ ಗಾಡಿಯಲ್ಲಿಟ್ಟುಕೊಂಡು ರಾಶಿಯವರು ಇದ್ದ ರಾಜಾನುಕುಂಟೆ - ಕಾಡನೂರು ರಸ್ತೆಯಿಂದ ಬರಗಂಡಿ ಲೇಔಟ್ ಒಳಗೆ ಕಾಂಪೌಂಡನಲ್ಲಿ ನಿಂತಿದ್ದ ರಾಶಿ ಅವರ ಬಳಿ ಹೋಗಿ ನಾನು ನಿನ್ನನ್ನು ತುಂಬಾ ಇಷ್ಟ ಪಡುತ್ತೇನೆ ಮದುವೆಯಾಗು ಎಂದು ಕೇಳಿದಾಗ ಅದಕ್ಕೆ ರಾಶಿ ಅವರು ಒಪ್ಪದಿದ್ದಾಗ ನೀನು ತಂದಿದ್ದ ಚಾಕುವಿನಿಂದ ಚುಚ್ಚಲು ಹೋದಾಗ ರಾಶಿಯು ಅವಳ ಕೈಯಲ್ಲಿದ್ದ ಕುಡುಗೋಲಿನಿಂದ ನಿನಗೆ ಹೊಡೆಯಲು ಬಂದಾಗ ಆರೋಪಿಯಾದ ನೀನು ನಿನ್ನ ಬಲಗೈಯಲ್ಲಿದ್ದ ಚಾಕುವನ್ನು ಎಡಗೈಗೆ ಹಿಡಿದುಕೊಂಡು ನಿನ್ನ ಬಲಗೈಯಿಂದ ಕುಡುಗೋಲನ್ನು ಹಿಡಿದುಕೊಂಡು ನಿನ್ನ ಎಡಗೈಯ್ಲಿದ್ದ ಚಾಕುವಿನಿಂದ ರಾಶಿಯ ಬಲಕುತ್ತಿಗೆಗೆ, ಎಡಕುತ್ತಿಗೆಗೆ, ಎದೆಗೆ, ಬೆನ್ನಿಗೆ ಚುಚ್ಚಿ ಕೊಲೆ ಮಾಡಿರುತ್ತೀಯಾ ಎಂದು ಭಾ.ದಂ.ಸಂ. ಕಲಂ.302 ರಡಿಯಲ್ಲಿ ಶಿಕ್ಷಾರ್ಹವಾದ

ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರೆಂದು ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

ಮೇಲೆ ಹೇಳಿದ ಆರೋಪಗಳ ವಿಚಾರಣೆಯು ಈ ನ್ಯಾಯಲಯದ ವ್ಯಾಪ್ತಿಗೆ ಒಳಪಡುವುದರಿಂದ ನೀನು ನನ್ನಿಂದ ವಿಚಾರಣೆಗೆ ಒಳಪಡುತ್ತಿಯೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 01.04.2024.
ಸ್ಥಳಃ ದೊಡ್ಡಬಳ್ಳಾಪುರ

**(ರಮೇಶ ದುರುಗಪ್ಪ ಏಕಬೋಟೆ)**
4ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ,

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ.**

**ಎಸ್.ಸಿ ನಂಃ 10007/2023**

ಫಿರ್ಯಾದಿದಾರರು : **ರಾಜಾನುಕುಂಟೆ ಪೋಲೀಸ್ ಠಾಣೆ**

**ವಿರುದ್ಧ**

**ಆರೋಪಿ : ಮಧುಚಂದ್ರ**

**ಆಪಾದನೆ**

**ಪ್ರಶ್ನೆಃ1** ಈಗ ಓದಿ ಹೇಳಿರುವುದು ನಿನಗೆ ತಿಳಿದಿರುತ್ತದೆಯೇ?

**ಉತ್ತರಃ ತಿಳಿಯಿತು.**

**ಪ್ರಶ್ನೆಃ2** ಸದರಿ ಆರೋಪವನ್ನು ನೀನು ಒಪ್ಪಿಕೊಳ್ಳುತ್ತಿಯೋ? ಇಲ್ಲ ವಿಚಾರಣೆ ನಡೆಸಬೇಕೆ?

**ಉತ್ತರಃ ವಿಚಾರಣೆ ಆಗಬೇಕು.**

ಮೇಲೆ ಹೇಳಿದ ಆರೋಪಗಳ ವಿಚಾರಣೆಯು ಈ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವುದರಿಂದ ನೀನು ನನ್ನಿಂದ ವಿಚಾರಣೆಗೆ ಒಳಪಡುತ್ತಿಯೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 01.04.2024.
ಸ್ಥಳಃ ದೊಡ್ಡಬಳ್ಳಾಪುರ

**(ರಮೇಶ ದುರುಗಪ್ಪ ಏಕಬೋಟೆ)**
4ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.